# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

**ವಿಷಯದ ಸಂಖ್ಯೆ: 40/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸ್ಯಾಂಕಿ ರಸ್ತೆಯ 6 Reach ಗಳಿಗೆ ಟೆಂಡರು ಪ್ರಕಟಣೆಯನ್ನು ಕಾರ್ಯಪಾಲಕ ಅಭಿಯಂತರರು ರಸ್ತೆ ಅಗಲೀಕರಣ ವಿಭಾಗ – 4 ರವರು ಅರ್ಹ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿರುತ್ತಾರೆ. ಸದರಿ ಟೆಂಡರು ಪ್ರಕಟಣೆಯಲ್ಲಿ ಗುತ್ತಿಗೆದಾರರುಗಳು ಭಾಗವಹಿಸಿದ್ದು, ದಿನಾಂಕ: 19.02.2003 ರಂದು ಬಿಡ್‌ದಾರರ ಸಮ್ಮುಖದಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ದಿನಾಂಕ: 27.10.2009 ರಂದು ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಬಿಡ್‌ದಾರರ ಸಮ್ಮುಖದಲ್ಲಿ ತೆರೆಯಲಾಗಿದ್ದು, ಪೈನೇಜುವಾರು ಗುತ್ತಿಗೆಯ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | 1ನೇ ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರು | 2ನೇ ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರು | 3ನೇ ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರು | ಷರಾ |
|---|---|---|---|---|
| 1. ಸರಪಳಿ 0.000 ಕಿ.ಮೀ. ನಿಂದ ಸರಪಳಿ 0.500 ಕಿ.ಮೀ. | | | | |
| ಅಂದಾಜು ಮೊತ್ತ: 3,76,02,233.00 | | | | |
| 2009-10ರ ದರ ಪಟ್ಟಿಯಂತೆ ಅಂದಾಜು: 4,10,36,091.00 | | | | |
| | ಶ್ರೀ ಮುನಿರತ್ನರವರು ಒಟ್ಟು ರೂ. 4,93,56,026.30 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.20.27% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ವೆಂಕಟರಾಮರೆಡ್ಡಿ ರವರು ಒಟ್ಟು ರೂ.5,07,80,958.69 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.23.75% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಕೆ.ದಾಮೋದರ್‌ರವ ರು ಒಟ್ಟು ರೂ.5,21,63,463.15 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.27.12% ರಷ್ಟು ಹೆಚ್ಚಾಗಿರುತ್ತದೆ. | ಸಂಧಾನದ ನಂತರ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತವು ರೂ.4,71,09,432.45 ಗಳಾಗಿದ್ದು, ಇದನ್ನು 2009-10ನೇ ಸಾಲಿನ ದರಸೂಚಿ ಮೊತ್ತ ರೂ.4,10,36,091.00 ಗಳಿಗೆ ಹೋಲಿಸಿದಾಗ ಶೇ.14.80% ರಷ್ಟು ಹೆಚ್ಚಾಗಿದ್ದು, ಈ ಟೆಂಡರ್‌ಗೆ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ |

2. ಸರವಳಿ 0.500 ಕಿ.ಮೀ. ನಿಂದ ಸರಪಳಿ 0.920 ಕಿ.ಮೀ.

ಅಂದಾಜು ಮೊತ್ತ ರೂ.3,15,84,673.21

2009-10ರ ದರ ಪಟ್ಟಿಯಂತೆ ಅಂದಾಜು: 3,43,81,712.25

| | | | | |
|---|---|---|---|---|
| | ಶ್ರೀ ಮುನಿರತ್ನರವರು ಒಟ್ಟು ರೂ. 4,13,44,385.50 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.20.25% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಎಂ. ಶಿವ ಶಂಕರ್ ಒಟ್ಟು ರೂ.4,22,40,076.43 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.22.86% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಜಿ.ಕೆ. ವಿನೋದ್ ಕುಮಾರ್‌ರವರು ಒಟ್ಟು 4,27,07,120.99 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.24.21% ರಷ್ಟು ಹೆಚ್ಚಾಗಿರುತ್ತದೆ. | ಸಂದಾನದ ನಂತರ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತವು ರೂ.3,94,70,205.66 ಗಳಾಗಿದ್ದು, ಇದನ್ನು 2009-10 ನೇ ಸಾಲಿನ ದರಸೂಚಿ ಮೊತ್ತ ರೂ.3,43,81,712.25 ಗಳಿಗೆ ಹೋಲಿಸಿದಾಗ ಶೇ.14.80% ರಷ್ಟು ಹೆಚ್ಚಾಗಿದ್ದು, ಈ ಟೆಂಡರ್‌ಗೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. |

3. ಸರವಳಿ 0.920 ಕಿ.ಮೀ. ನಿಂದ ಸರಪಳಿ 1.800 ಕಿ.ಮೀ.

ಅಂದಾಜು ಮೊತ್ತ ರೂ.4,89,68,399.55

2009-10ರ ದರ ಪಟ್ಟಿಯಂತೆ ಅಂದಾಜು: 5,31,05,651.67

| | | | | |
|---|---|---|---|---|
| | ಶ್ರೀ ಮುನಿರತ್ನರವರ ಒಟ್ಟು ರೂ. 6,39,73,785.00 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.20.47% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಎಂ. ರಮೇಶ್‌ರವರು ಒಟ್ಟು ರೂ. 6,55,49,415.91 ಗಳನ್ನು ನಮೂದಿಸಿದ್ದು ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.23.43% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಕೆ.ದಾಮೋದರ್‌ರವರು ಒಟ್ಟು 6,64,19,468.23 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.25.07% ರಷ್ಟು ಹೆಚ್ಚಾಗಿರುತ್ತದೆ. | ಸಂಧಾನದ ನಂತರ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತವು ರೂ.6,09,65,288.11 ಗಳಾಗಿದ್ದು, ಇದನ್ನು 2009-10 ನೇ ಸಾಲಿನ ದರಸೂಚಿ ಮೊತ್ತ ರೂ.5,31,05,651.67 ಗಳಿಗೆ ಹೋಲಿಸಿದಾಗ ಶೇ.14.80% ರಷ್ಟು ಹೆಚ್ಚಾಗಿದ್ದು, ಈ ಟೆಂಡರ್‌ಗೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. |

4. ಸರಪಳಿ 1.800 ಕಿ.ಮೀ. ನಿಂದ ಸರಪಳಿ 2.200 ಕಿ.ಮೀ.

ಅಂದಾಜು ಮೊತ್ತ ರೂ.4,98,03,891.28

2009-10ರ ದರ ಪಟ್ಟಿಯಂತೆ ಅಂದಾಜು: **5,15,77,090.00**

| | | | | |
|---|---|---|---|---|
| | ಶ್ರೀ ಮುನಿರತ್ನ ರವರು ಒಟ್ಟು ರೂ. 6,45,49,260.00 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.25.15% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ವೇಣು ಗೋಪಾಲ ರವರು ಒಟ್ಟು ರೂ. 7,03,19,112.00 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.36.34% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಎಸ್.ಎಂ. ರಾಜು ರವರು ಒಟ್ಟು 7,68,80,123.75 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.49.06% ರಷ್ಟು ಹೆಚ್ಚಾಗಿರುತ್ತದೆ. | ಸಂಧಾನದ ನಂತರ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತವು ರೂ.5,92,10,499.75 ಗಳಾಗಿದ್ದು, ಇದನ್ನು 2009-10 ನೇ ಸಾಲಿನ ದರಸೂಚಿ ಮೊತ್ತ ರೂ.5,15,77,090.00 ಗಳಿಗೆ ಹೋಲಿಸಿದಾಗ ಶೇ.14.80% ರಷ್ಟು ಹೆಚ್ಚಾಗಿದ್ದು, ಈ ಟೆಂಡರ್‌ಗೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. |

5. ಸರಪಳಿ 2.200 ಕಿ.ಮೀ. ನಿಂದ ಸರಪಳಿ 2.600 ಕಿ.ಮೀ.

ಅಂದಾಜು ಮೊತ್ತ ರೂ.**4,98,03,043.04**

2009-10ರ ದರ ಪಟ್ಟಿಯಂತೆ ಅಂದಾಜು: **5,15,69,678.24**

| | | | | |
|---|---|---|---|---|
| | ಶ್ರೀ ಮುನಿರತ್ನ ರವರು ಒಟ್ಟು ರೂ. 6,45,89,280.00 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ. 25.25% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಸಿ.ಟಿ.ರಾಜು ರವರು ಒಟ್ಟು ರೂ. 6,62,38,047.24 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.28.44% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಪಿ.ಆರ್.ಸುರೇಶ್ ರವರು ಒಟ್ಟು 6,73,33,714.18 ಗಳನ್ನು ನಮೂದಿಸಿದ್ದು ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.30.57% ರಷ್ಟು ಹೆಚ್ಚಾಗಿರುತ್ತದೆ. | ಸಂಧಾನದ ನಂತರ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತವು ರೂ.5,92,01,990.61 ಗಳಾಗಿದ್ದು, ಇದನ್ನು 2009-10 ನೇ ಸಾಲಿನ ದರಸೂಚಿ ಮೊತ್ತ ರೂ.5,15,69,678.24 ಗಳಿಗೆ ಹೋಲಿಸಿದಾಗ ಶೇ.14.80% ರಷ್ಟು ಹೆಚ್ಚಾಗಿದ್ದು, ಈ ಟೆಂಡರ್‌ಗೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. |

| | | | | |
|---|---|---|---|---|
| 6. ಸರಪಳಿ 2.600 ಕಿ.ಮೀ. ನಿಂದ ಸರಪಳಿ 3.338 ಕಿ.ಮೀ. | | | | |
| ಅಂದಾಜು ಮೊತ್ತ ರೂ.3,25,08,927.80 | | | | |
| 2009-10ರ ದರ ಪಟ್ಟಿಯಂತೆ ಅಂದಾಜು: **3,55,23,228.92** | | | | |
| | ಶ್ರೀ ಮುನಿರತ್ನ ರವರು ಒಟ್ಟು ರೂ. 4,27,18,541.00 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.20.26% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಎನ್.ಎಂ.ಕೃಷ್ಣಮೂರ್ತಿ ರವರು ಒಟ್ಟು ರೂ. 4,44,23,190.70 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.25.05% ರಷ್ಟು ಹೆಚ್ಚಾಗಿರುತ್ತದೆ. | ಶ್ರೀ ಕೆ.ಆರ್.ವ್ಯಾಸರಾಜ್ ರವರು ಒಟ್ಟು 4,54,68,354.65 ಗಳನ್ನು ನಮೂದಿಸಿದ್ದು, ಇದನ್ನು 2009-10ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.28.00% ರಷ್ಟು ಹೆಚ್ಚಾಗಿರುತ್ತದೆ. | ಸಂಧಾನದ ನಂತರ ಮುನಿರತ್ನ ರವರ ಗುತ್ತಿಗೆ ಮೊತ್ತವು ರೂ.4,07,80,666.80 ಗಳಾಗಿದ್ದು, ಇದನ್ನು 200 10 ನೇ ಸಾಲಿನ ದರ ಪ ಮೊತ್ತ ರೂ.3,55,23,228. ಗಳಿಗೆ ಹೋಲಿಸಿದ ಶೇ.14.80% ರ ಹೆಚ್ಚಾಗಿದ್ದು, ಈ ಟೆಂಡರ ಮಾನ್ಯ ಆಡಳಿತಗಾರ ಅನುಮೋದನೆ ನೀಡಿರುತ್ತಾ |

ಮೇಲಿನ ಆರು ಟೆಂಡರುಗಳ ಕನಿಷ್ಠ ಮೊತ್ತದ ಗುತ್ತಿಗೆಯನ್ನು ಸಲ್ಲಿಸಿರುವ ಗುತ್ತಿಗೆದಾರರ ಟೆಂಡರುಗಳಿಗೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. ಆದರೆ ಕನಿಷ್ಠ ಮೊತ್ತದ ಗುತ್ತಿಗೆದಾರರು ತಮಗೆ ಆರ್ಥಿಕ ನಷ್ಟವಾಗಿದ್ದು, ತಮ್ಮ ಗುತ್ತಿಗೆ ನೋಂದಣಿಯನ್ನು ರದ್ದುಪಡಿಸಲು ಕೋರಿರುವ ಮೇರೆಗೆ ಸದರಿ ಕಾಮಗಾರಿಗಳ ಗುತ್ತಿಗೆಯನ್ನು ರದ್ದು ಪಡಿಸಲು ಮಾನ್ಯ ಆಯುಕ್ತರವರಿಂದ ಮಾನ್ಯ ಆಡಳಿತಗಾರರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆದರೆ ಕೌನ್ಸಿಲ್ ಕಾರ್ಯದರ್ಶಿಗಳು ಕೆಳಗಿನಂತೆ ನಿವೇದಿಸಿ ಕಡತವನ್ನು ಹಿಂದಿರುಗಿಸಿರುತ್ತಾರೆ.

**"ಪ್ರಸ್ತಾವನೆಯನ್ನು ಮುಂದುವರೆಸುತ್ತಾ, ಮುಂದಿನ ದಿನಗಳಲ್ಲಿ ಸ್ಥಾಯಿ ಸಮಿತಿಯು ರಚನೆಯಾದ ನಂತರ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಪ್ರಸ್ತಾವನೆಯನ್ನು ಮರು ಮಂಡಿಸಲು ಕೋರುತ್ತಾ ಕಡತವನ್ನು ಹಿಂದಿರುಗಿಸಲಾಗಿದೆ".**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕೆಳಕಂಡಂತೆ ಅನುಮೋದನೆ ಕೋರಿದೆ.

1. ಈ ರಸ್ತೆಯ ಆರು ಕಾಮಗಾರಿಗಳ ಟೆಂಡರ್ ಪ್ರಸ್ತಾವನೆಗಳಲ್ಲಿ ಕನಿಷ್ಠ ಮೊತ್ತವನ್ನು ನಮೂದಿಸಿರುವ ಗುತ್ತಿಗೆದಾರರಾದ ಶ್ರೀ ಮುನಿರತ್ನ ರವರ ಗುತ್ತಿಗೆಯನ್ನು ರದ್ದು ಪಡಿಸುವುದು.

2. ಈ ಕಾಮಗಾರಿಯು ರಸ್ತೆ ಅಗಲೀಕರಣದಲ್ಲಿ ಮೊದಲನೇ ಹಂತದಲ್ಲಿರುವ ಕಾಮಗಾರಿಗಳಲ್ಲಿ ಸೇರಿರುವುದರಿಂದ ಮತ್ತು ಎರಡು ರಾಷ್ಟ್ರೀಯ ಹೆದ್ದಾರಿಗಳಿಗೆ (NH-4 & NH-7) ಸಂಪರ್ಕ ಕಲ್ಪಿಸುವ ಅತಿ ಪ್ರಮುಖ ರಸ್ತೆಯಾಗಿರುವುದರಿಂದ ಇದನ್ನು ತಕ್ಷಣವೇ ತೆಗೆದುಕೊಳ್ಳಬೇಕಾಗಿರುತ್ತದೆ. ಈ ರಸ್ತೆಯ ಅಗಲೀಕರಣ ಕಾಮಗಾರಿಯನ್ನು ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರು ಈಗಾಗಲೇ ಶಂಕುಸ್ಥಾಪನೆ ನೆರವೇರಿಸಿರುತ್ತಾರೆ. ಆದ್ದರಿಂದ ಸಮಯ ವಿಳಂಬವನ್ನು ತಡೆಯಲು, ಎರಡನೇ ಕನಿಷ್ಠ ದರ ನಮೂದಿಸಿರುವ ಬಿಡ್‌ದಾರರು ಮೊದಲನೇ ಬಿಡ್‌ದಾರರಿಗೆ ಅನುಮೋದನೆಯಾದ ಗುತ್ತಿಗೆ ದರಗಳಿಗೆ ಕಾಮಗಾರಿಗಳನ್ನು ನಿರ್ವಹಿಸಲು ಒಪ್ಪಿದ ಪಕ್ಷದಲ್ಲಿ ಎರಡನೇ ಬಿಡ್‌ದಾರರಿಗೆ ಸದರಿ ಟೆಂಡರ್ ಅನ್ನು ನೀಡುವ ಬಗ್ಗೆ ಅನುಮೋದನೆ ಅಥವಾ ಮರು ಟೆಂಡರ್ ಆಹ್ವಾನಿಸಲು ಅನುಮೋದನೆ.

ಮೇಲ್ಕಂಡ 2 (ಎರಡು) ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ಟಿಪ್ಪಣಿ.

ಆಡಳಿತಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ನಿರ್ಣಯ:- ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಎರಡನೇ ಕನಿಷ್ಠದರ ನಮೂದಿಸಿರುವ ಬಿಡ್‌ದಾರರು ಮೊದಲನೆ ಬಿಡ್‌ದಾರರ ಅನುಮೋದನೆಯಾದ ಗುತ್ತಿಗೆ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪದಿದ್ದ ಪಕ್ಷದಲ್ಲಿ, ಮೂರನೇ ಬಿಡ್‌ದಾರರು ಮೊದಲನೆ ಬಿಡ್‌ದಾರರು ನಮೂದಿಸಿರುವ ದರಗಳಲ್ಲಿ ಕಾಮಗಾರಿ ನಿರ್ವಹಿಸಲು ಒಪ್ಪಿದಲ್ಲಿ ಸದರಿ ಗುತ್ತಿಗೆ ವಹಿಸುವುದು.

**ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು**

**ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು**

ನಿರ್ಣಯ:- ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಎರಡನೇ ಕನಿಷ್ಠದರ ನಮೂದಿಸಿರುವ ಬಿಡ್‌ದಾರರು ಮೊದಲನೆ ಬಿಡ್‌ದಾರರ ಅನುಮೋದನೆಯಾದ ಗುತ್ತಿಗೆ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪದಿದ್ದ ಪಕ್ಷದಲ್ಲಿ, ಮೂರನೇ ಬಿಡ್‌ದಾರರು ಮೊದಲನೆ ಬಿಡ್‌ದಾರರು ನಮೂದಿಸಿರುವ ದರಗಳಲ್ಲಿ ಕಾಮಗಾರಿ ನಿರ್ವಹಿಸಲು ಒಪ್ಪಿದಲ್ಲಿ ಸದರಿ ಗುತ್ತಿಗೆ ವಹಿಸುವುದು.

(ಎಸ್.ಕೆ. ನಟರಾಜು)
ಮಹಾಪೌರರು